ಸಂಗ್ರಹಿಸಿಕೊಂಡ. ಊರಿನ ಕಡೆ ಏನಾಯ್ತೋ? ಅರ್ಧಕ್ಕೇ ನಿಂತಿದ್ದ ಮನೆಯ ಕಟ್ಟಡದ ಕೆಲಸವನ್ನು ಮಗ ಮುಂದುವರಿಸಿದ್ದಾನೋ, ಇಲ್ಲವೋ; ಒಂದು ಸಂಸಾರವನ್ನು ಸರಿಯಾಗಿ ಕಟ್ಟುವುದಕ್ಕೆ ಒಂದು ಜೀವಮಾನವನ್ನೇ ಸವೆಸಬೇಕು. ಅಂತದ್ದರಲ್ಲಿ ಅದನ್ನು ಹಾಳುಗೆಡುವುದಕ್ಕೆ ಹೆಚ್ಚು ಸಮಯಬೇಕಾಗಲ್ಲ, ತನ್ನ ಮಗ ಎಲ್ಲಿ ಕುಡಿತ, ಜೂಜು ಅಂಥ ಆಡುತ್ತಾ ಕಾಲ ಕಳೆಯುತ್ತಿದ್ದಾನೋ ಎಂದುಕೊಂಡು ಚಿಂತೆಯಿಂದ ತನ್ನ ಪಯಣವನ್ನು ಊರಿನ ಕಡೆ ಬೆಳೆಸಿದ.

4

ರಾಮ ಕಾಶಿಯಾತ್ರೆ ಮುಗಿಸಿ ಮರಳಿ ತನ್ನೂರಿಗೆ ಬರುತ್ತಿರುವಾಗ ಹಿಂದೆ ತನ್ನ ಗೆಳೆಯ ಶಿವ ನೀರು ಕುಡಿಯಲು ಹೋದ ಜಾಗಕ್ಕೆ ಬಂದಾಗ ಅವನಿಗೆ ಶಿವನ ನೆನಪಾಯಿತು. ಅಲ್ಲಿ ಶಾಲೆಯಿಂದ ಬರುತ್ತಿದ್ದ ಒಬ್ಬ ಬಾಲಕ ಅವನಿಗೆ ಎದುರಿಗೆ ಸಿಕ್ಕಿ 'ತಾತ, ನಮ್ಮ ಮನೆಗೆ ಬನ್ನಿ, ದೂರದಿಂದ ಬಂದಂತೆ ಕಾಣುತ್ತದೆ!' ಎಂದು ಕರೆದ. ಆಗ ರಾಮ ಆ ಬಾಲಕನನ್ನು ಹಿಂಬಾಲಿಸಿ ಅವರ ಗುಡಿಸಲಿಗೆ ಹೋದ. ಅಲ್ಲಿ ಆ ಬಾಲಕನ ಅಜ್ಜಿ ರಾಮನಿಗೆ ವಿಚಾರಿಸಿ ಊಟ ಬಡಿಸಿ ಅವನ ಊರುಕೇರಿ ತಿಳಿದುಕೊಂಡಳು. ಆ ಮನೆಯ ಅಜ್ಜ, ಹಿಂದೆ ಪಟ್ಟಣಕ್ಕೆ ಹೋದ ತನ್ನ ಮಗನೇ ಬಂದಿರಬಹುದೆಂದು ಆಸೆಯಿಂದ ಓಡೋಡಿ ಬಂದು ನೋಡಿದ. ಆದರೆ ಅಜ್ಜನಿಗೆ ಅವರು ಬೇರೆ ಅತಿಥಿ ಎಂದು ಗೊತ್ತಾಯಿತು. ರಾಮ ತನ್ನ ಹಸಿವನ್ನು ನೀಗಿಸಿದ ಅಜ್ಜ, ಅಜ್ಜಿಯನ್ನು ಶ್ಲಾಘಿಸಿದನು. ಆಗ ಆ ಅಜ್ಜಿ ರಾಮನಿಗೆ, 'ನಿಮ್ಮಂಥ ಕಾಶಿಗೆ ಹೋಗಿ ಬಂದ ಪುಣ್ಯಾತ್ಮರನ್ನು ಕರೆದು ಉಪಚಾರ ಮಾಡುವುದರಿಂದ ನಮಗೂ ಪುಣ್ಯ ಬರುತ್ತದೆ. ನಾವಂತೂ ಅಷ್ಟುದೂರ ಹೋಗಿ ಬರಲು ಆಗಲ್ಲ. ಹಸಿವಿನಲ್ಲಿ, ಬಡತನದಲ್ಲಿ ನರಳುತ್ತಾ ಮಲಗಿದ್ದ ನಮಗೆ ಉಪಚರಿಸಿ ಹೋದವರು ನಮ್ಮ ಮನೆಗೆ ಬಂದಿದ್ದ ನಿಮ್ಮಂತಹ ಒಬ್ಬ ಕಾಶಿಯಾತ್ರಿಕ. ನಾವು ತಿನ್ನುವುದಕ್ಕೆ ಏನೂ ಇಲ್ಲದೆ ಜೀವದ ಆಸೆಯನ್ನೇ ತೊರೆದು ಮಲಗಿದ್ದಾಗ ನಮ್ಮ ಭಾಗಕ್ಕೆ ಆತ ದೇವರಂತೆ ಬಂದು ನಮ್ಮನ್ನು ಸಾವಿನಿಂದ ಪಾರು ಮಾಡಿ ನಮ್ಮನ್ನು ಬದುಕಿಸಿ ಹೋದನು' ಎಂದಳು.

ರಾಮ ಕುತೂಹಲದಿಂದ, 'ಆ ಯಾತ್ರಿಕ ಯಾರಜ್ಜಿ?' ಎಂದು ಕೇಳಿದನು. ಅಜ್ಜಿ, 'ಅವನು ಯಾರೋ? ಎಲ್ಲಿಂದ ಬಂದಿದ್ದನೋ? ಆಮೇಲೆ ಎಲ್ಲಿಗೆ ಹೊರಟು ಹೋದ್ನೊ? ಕೊನೆಗೂ ನಮಗೆ ಅವನ ಸುಳಿವು ಗೊತ್ತಾಗಲೇ ಇಲ್ಲ. ಆದರೆ ಆತ ನಮ್ಮ ಮನೆಗೆ ಬಂದಾಗ, 'ಬಾಯಾರಿಕೆಯಾಗಿದೆ. ಕುಡಿಯಲು ಸ್ವಲ್ಪ ನೀರು ಕೊಡಿ ಅಂಥ ಬಂದವನು. ಆಗ ಆತ ನಾವಿದ್ದ ಸ್ಥಿತಿಯನ್ನು ಕಂಡು, ಕರುಣೆಯಿಂದ ನಮ್ಮ ಜೊತೆಯಲ್ಲಿಯೇ ನಮ್ಮ ಸೇವೆ ಮಾಡುತ್ತಾ ನಿಂತುಬಿಟ್ಟನು. ಅವನು ನಮಗೆ ಅನ್ನ, ನೀರು, ಸೂರು, ಕೈಗಳಿಗೆ ಕೆಲಸ ಕೊಟ್ಟು, ನಮ್ಮ ಕಾಲಮೇಲೆ ನಾವು ನಿಲ್ಲುವಂತೆ ಮಾಡಿ ನಮಗೆ ಹೇಳದೆ ಕೇಳದೆ ಹೊರಟು ಹೋದನು. ಅವನು ನಮಗೆ ಹೊಲ, ಗಾಡಿ, ಎತ್ತು, ಹಸು ಎಲ್ಲವನ್ನೂ ಮಾಡಿಕೊಟ್ಟು ಹೋದನು. ಅವನು ನಮ್ಮ ಮನೆಯಲ್ಲಿದ್ದಷ್ಟೂ ದಿನ ನಮ್ಮೆಲ್ಲರನ್ನು ತುಂಬಾ ಪ್ರೀತಿಸುತ್ತಿದ್ದನು" ಎಂದಳು.

'ಅವನು ನಮ್ಮ ಗುಡಿಸಲಿಗೆ ಆ ಮನುಷ್ಯ ಬಂದಾಗ ಎಲ್ಲಿ ಇವನು ನಮಗೆ ಹೊಂಚು ಹಾಕಿಕೊಂಡು ಬಂದಿದ್ದಾನೋ ಎಂದು ಭಯವಾಗಿತ್ತು. ಆದರೆ ಅವನು ನಮ್ಮನ್ನು ಕಂಡ ಕೂಡಲೇ ತಾನು ಹೊತ್ತು ತಂದಿದ್ದ ರೊಟ್ಟಿ ಬುತ್ತಿಯನ್ನು ಬಿಚ್ಚಿ ನಮ್ಮ ಮುಂದೆ ಇಟ್ಟಿದ್ದನು. ನಾವು ಅವನ ಕುಲಗೋತ್ರ, ಊರುಕೇರಿ ಅರಿಯುವ ಹೊತ್ತಿಗೆ ಅವನೇ ಒಂದು ರಾತ್ರಿ ಇದ್ದಕ್ಕಿದ್ದಂತೆ ಮಾಯವಾಗಿದ್ದನು. ಅವನು ಎಲ್ಲೇ ಇರಲಿ, ಅವನನ್ನು ದೇವರು ಚೆನ್ನಾಗಿ ಇಟ್ಟಿರಲಿ. ನಮ್ಮನ್ನು ಬದುಕಿಸಿ ಹೋದ ಆ ಪುಣ್ಯಾತ್ಮನ ಕುಟುಂಬ ಚೆನ್ನಾಗಿ ಬದುಕಲಿ' ಎಂದನು ಆ ವೃದ್ಧ.

ಆ ರಾತ್ರಿ ರಾಮ ಆ ರೈತನ ಮನೆಯಲ್ಲಿಯೇ ಮಲಗಿ ಸಮಯ ತುಂಬಿಸಿದನು. ಅವನಿಗೆ ರಾತ್ರಿಯೆಲ್ಲಾ ನಿದ್ದೆ ಬರಲಿಲ್ಲ. ತಾನು ಕಾಶಿಯಲ್ಲಿ ಕಂಡ ತನ್ನ ಮಿತ್ರ ಶಿವನನ್ನೇ ನೆನೆಯುತ್ತಿದ್ದನು. ಆಗ ಆತ 'ನನಗೆ ಗೊತ್ತಾಯ್ತು. ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತು. ಕಾಶಿ ವಿಶ್ವನಾಥ ನನ್ನ ಹರಕೆಯನ್ನು ಸ್ವೀಕರಿಸಿದನೋ ಇಲ್ಲವೋ ತಿಳಿಯದು. ಆದರೆ ಆ ದೇವರು ನಮ್ಮ ಶಿವನ ಈ ಸೇವೆಯನ್ನು ಖಂಡಿತವಾಗಿಯೂ ಸ್ವೀಕರಿಸಿರುತ್ತಾನೆ' ಎಂದುಕೊಂಡು, ಊರಿಗೆ ಹೊರಡಲು ಸಿದ್ಧನಾದನು.

ರಾಮ ಆ ವೃದ್ಧ ದಂಪತಿಗಳಿಗೆ ಹೇಳಿ ಊರಿಗೆ ಬಂದನು. ಆತ ಊರು ಬಿಟ್ಟು ಕಾಶಿಗೆ ಹೋಗಿ ಬರಲು ಸಾಕಷ್ಟು ದಿನಗಳನ್ನೇ ತೆಗೆದುಕೊಂಡಿದ್ದನು. ಆತ ಬಂದಾಗ ತನ್ನ ಮಗ ಮನೆಯಲ್ಲಿ ಇರಲಿಲ್ಲ. ಇಸ್ಪೀಟ್